



ನೋಡಿಕೊಳ್ಳಬೇಕು. ಎಷ್ಟೋ ಪೋಷಕರು ತಮ್ಮ ಮಗು ಮಾತನಾಡುತ್ತಿಲ್ಲ. ಶಾಲೆಗೆ ಕಳಿಸಿದರೆ ಮಾತನಾಡುತ್ತದೆ ಎಂದು ಭಾವಿಸಿರುತ್ತಾರೆ. ಎಲ್ಲ ಸಮಸ್ಯೆಗಳಿಗೂ ಶಾಲೆಯೇ ಪರಿಹಾರ ಎಂದು ಪೋಷಕರು ಭಾವಿಸುತ್ತಾರೆ. ಅಂತಹ ಸಂದರ್ಭದಲ್ಲಿ ಶಾಲೆ ಕೂಡ ಮಕ್ಕಳ ಬಗ್ಗೆ ಪೋಷಕರಿಗೆ ದೂರುತ್ತವೆ. ಆಗ ಮಗು ಬಲಿಪಶು ಆಗುತ್ತದೆ.



### ಪೋಷಕರ ಪ್ರೀತಿ ಮತ್ತೊಬ್ಬರಿಂದ ಸಿಗುವುದೆ?

ಬೌದ್ಧಿಕ ನ್ಯೂನತೆಯಿಂದ ಬಳಲುತ್ತಿರುವ ತಮ್ಮ ಮಗ ವಿಶಾಲ್ ಬಗ್ಗೆ ತಂದೆ ರವಿಕುಮಾರ್ ಹೇಳಿದ್ದು ಹೀಗೆ...

ಮೂಲತಃ ಕನಕಪುರ, ಬೆಂಗಳೂರಿನಲ್ಲಿಯೇ ನೆಲೆಸಿದ್ದೇವೆ. ಕಂಪ್ಯೂಟರ್ ಸಿಸ್ಟಂ ಸರ್ವೀಸ್ ಎಂಜಿನಿಯರ್ ಆಗಿದ್ದೇನೆ. ಪತ್ನಿ ವಸಂತಾ, ಮಗನ ಪಾಲನೆಯನ್ನು ಜವಾಬ್ದಾರಿಯಿಂದ ನಿರ್ವಹಿಸುತ್ತಿದ್ದಾರೆ. ವಿಶಾಲ್ 14 ವರ್ಷದ ಮಗ. ಅವನ ಕತ್ತು ಸರಿಯಾಗಿ ಕೂತಿರಲಿಲ್ಲ. ಹುಟ್ಟಿದ ಮೂರು ತಿಂಗಳಲ್ಲಿಯೇ ತೊಂದರೆ ಇದೆ ಎನ್ನುವ ಸೂಕ್ಷ್ಮ ಗೊತ್ತಾಯಿತು. ಅದಕ್ಕಾಗಿ ಆಸ್ಪತ್ರೆಗಳಿಗೆ ಅಲೆದಾಡುವುದು ಅನಿವಾರ್ಯವಾಯಿತು.



ರವಿಕುಮಾರ್

ದೈಹಿಕವಾಗಿಯೂ ತುಂಬ ಕೃಶವಾಗಿದ್ದ. ಬೇರೆ ಬೇರೆ ವೈದ್ಯರಿಗೆ ತೋರಿಸಿದೆವು. ಕೊನೆಗೆ ಎಂಆರ್‌ಐ ಸ್ಕ್ಯಾನ್ ಮಾಡಿಸಿದ ಮೇಲೆ ಅವನ ಮೆದುಳನ್ನು ಸಂಪರ್ಕಿಸುವ ನರಕ್ಕೆ ಹಾನಿ ಆಗಿದೆ ಎನ್ನುವುದು ಗೊತ್ತಾಯಿತು. ಆ ನ್ಯೂನತೆಗೆ ಚಿಕಿತ್ಸೆಯನ್ನು ನೀಡಲು ಆರಂಭಿಸಿದೆವು. ಅಂತಹ ಮಕ್ಕಳ ಪಾಲನೆಗೆ ತುಂಬ ಸಹನೆ ಮತ್ತು ತಾಳ್ಮೆ ಬೇಕಾಗುತ್ತದೆ. ಮಗು ಮೇಲಿನ ನಮ್ಮ ಪ್ರೀತಿ ಅದನ್ನು ಕಲಿಸುತ್ತದೆ.

ನ್ಯೂನತೆ ಇರುವ ಮಕ್ಕಳು ನಿಜಕ್ಕೂ ವಿಶೇಷ. ನಾವು ಹೇಳಿದ್ದು ಅವರಿಗೆ ಗೊತ್ತಾಗುವುದಿಲ್ಲ. ನಾವು ಹೇಳುವುದು ಅರ್ಥವೂ ಆಗುವುದಿಲ್ಲ. ಹಟ ಮಾಡುತ್ತಾರೆ. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಮ್ಮ ಮಗನಿಗೆ ದೈಹಿಕ ಸಮಸ್ಯೆಗಳು ಕಾಡಿದರೂ ಹೇಳಲು ಗೊತ್ತಾಗುವುದಿಲ್ಲ. ಪೋಷಕರಾದ ನಾವೇ ತಿಳಿಯಬೇಕಾಗುತ್ತದೆ. ಮಕ್ಕಳ ವರ್ತನೆಯನ್ನು ಸಹನೆಯಿಂದ ನೋಡುತ್ತಾ ಸಹಜವಾಗಿ ಅರ್ಥಮಾಡಿಕೊಳ್ಳಲು ಶುರುಮಾಡಬೇಕು. ಆಗ ನಮ್ಮ ಮಗು ಎಲ್ಲರಿಗಿಂತ ಭಿನ್ನ ಎನ್ನುವುದು ಗೊತ್ತಾಗುತ್ತದೆ. ನಮ್ಮ ಮಗ ಸನ್ನೆಗಳ ಮೂಲಕವೇ ಸಂವಹನ ಮಾಡುತ್ತಾನೆ. ಅವನ ನಡವಳಿಕೆಯಲ್ಲಿ ಆಗುವ ಬದಲಾವಣೆಯನ್ನು ಗ್ರಹಿಸುವುದು ನಮ್ಮ ಮೊದಲ ಕೆಲಸ.

ನಮ್ಮ ಮಗನ ಸಂಬಂಧ ಜೀವನದಲ್ಲಿ ಬಂದಿದ್ದನ್ನು ಎದುರಿಸಬೇಕು ಎನ್ನುವ ಸಂಕಲ್ಪವನ್ನು ಮಾಡಿಕೊಂಡಿದ್ದೇವೆ. 'ಪಾಲಿಗೆ ಬಂದಿದ್ದು ಪಂಚಾಮೃತ' ಅನ್ನುತ್ತಾರಲ್ಲ ಹಾಗೆ. ಜೀವನದಲ್ಲಿ ಎದುರಾಗುವ ಕಷ್ಟಗಳಿಂದ ವಿಮುಖರಾಗಲು ಆಗುವುದಿಲ್ಲ. ಎಲ್ಲ ಸಮಸ್ಯೆಗಳನ್ನು ಎದುರಿಸಲೇಬೇಕಾಗುತ್ತದೆ. ನಮ್ಮ ಮಗನನ್ನು ನಾವೇ ಸಾಕಬೇಕು ಎನ್ನುವ ಕಕ್ಕುಲಾತಿಯೂ ನಮ್ಮಲ್ಲಿ ಇದೆ. ಅದು ಜವಾಬ್ದಾರಿ ಕೂಡ. ಇದನ್ನು ನಾವಿಬ್ಬರೂ ಒಪ್ಪಿದ್ದೇವೆ. ಕಷ್ಟ ಆದರೂ ಅದನ್ನು ಮಾಡುತ್ತೇವೆ. ವಿಶಾಲ್‌ನನ್ನು ಆರಂಭದಲ್ಲಿ ಶಾಲೆಗೆ ಕಳಿಸಲು ಆಗಲಿಲ್ಲ. ಬೆಂಗಳೂರಿನ